ಎನಿಸಿಕೊಂಡವ ಫಿಯಟಿನಲ್ಲಿ ಕೆಲಸ ಮಾಡುತ್ತಿದ್ದ. ಕಂಪನಿಯ ಹಿಂಭಾಗದ ಕ್ವಾಟ್ರರ್ಸಿನಲ್ಲಿ ವಾಸಕ್ಕೆ ಮನೆ ಇತ್ತು. ಕಂಪನಿ ಇದ್ದದ್ದು ಮಧ್ಯ ಮುಂಬಯಿಯ ಕುರ್ಲಾದಲ್ಲಿ. ನಾನು ಅದೇ ಏರಿಯಾದಲ್ಲಿ ಹುಟ್ಟಿ ಬೆಳೆದೆ. ಅಕ್ಕಪಕ್ಕ ಸುತ್ತು ಮುತ್ತಲೆಲ್ಲ ಕಂಪನಿಯ ಕೆಲಸಗಾರರ ಮಕ್ಕಳೇ. ಎಲ್ಲರೂ ಗೆಳೆಯರೇ. ಮ್ಯಾನೇಜರು ಸಾಹೇಬರುಗಳ ಬಂಗಲೆಯ ಮಕ್ಕಳದು ಬೇರೆ ಗುಂಪು. ನನಗೆ ದೀಪಕ್ ತುಂಬ ಹತ್ತಿರವಾದ ಹುಡುಗ. ಒಟ್ಟಿಗೇ ಕಲಿತೆವು. ತುಂಟ ಹುಡುಗ, ಆದರೆ ಪ್ರಾಯಕ್ಕೂ ಮೀರಿದ ಧೈರ್ಯ. ಏನೇ ಮಾಡುವುದಿದ್ದರೂ ಮುಚ್ಚು ಮರೆಯಿಲ್ಲ. ನೇರಾನೇರ, ಯಾರನ್ನೂ ಎದುರಿಸಬಲ್ಲ ಛಾತಿ. ಒಳ್ಳೆಯ ಗುಣದವನು. ಮೋಸ ವಂಚನೆಗಳನ್ನು ಖಂಡಿಸಬಲ್ಲ ವಿಶ್ವಾಸಿ. ಅವನ ತಂದೆ ನಿವೃತ್ತರಾದ ಮೇಲೆ ಕ್ವಾಟ್ರರ್ಸ್ ಬಿಟ್ಟು ದೊಂಬಿವಲಿಯ ಸ್ವಂತ ಮನೆಗೆ ಹೋದರು. ದೀಪಕ್ ಮತ್ತು ನಾನು ಒಟ್ಟಿಗೇ ಕಂಪನಿ ಸೇರಿದವರು. ಇಬ್ಬರೂ ಒಟ್ಟಿಗೇ ವಿ.ಆರ್.ಎಸ್ ಪಡೆದುಕೊಂಡೆವು. ಆತ ತನ್ನದೇ ವ್ಯಾಪಾರ ವಹಿವಾಟು ಆರಂಭಿಸಿದ. ನಾನು ಸಿಕ್ಕಿದ್ದ ಅಷ್ಟೂ ಹಣವನ್ನು ಬ್ಯಾಂಕಿನಲ್ಲಿ ಡಿಪಾಸಿಟ್ ಇಟ್ಟು ಮುಂಬಯಿ ಬಿಟ್ಟು ಹೋದೆ. ಕೆಲಸ ಹುಡುಕುತ್ತಾ ಅಲ್ಲಿ ಇಲ್ಲಿ ಅಲೆದೆ. ಕೆಲಸವೇನೋ ಸಿಕ್ಕಿತ್ತು. ಆದರೆ, ಮೈ ಮುರಿದು ದುಡಿಯುವ ಅಭ್ಯಾಸವೇ ಇರಲಿಲ್ಲ. ಹಾಗಾಗಿ, ನನಗೆ ಸಿಕ್ಕಿದ ಕೆಲಸಗಳನ್ನು ಮಾಡುವುದು ಸುಲಭವಾಗಲಿಲ್ಲ. ಮುಂದುವರಿಯಲು ಅಸಾಧ್ಯವೆಂದು ಕಂಡಿತು. ತುಂಬ ಕಷ್ಟ ಪಟ್ಟೆ. ದೀಪಕನ ನೆನಪು ಬಂದು ಸೀದಾ ಅವನಿದ್ದಲ್ಲಿಗೆ ಬಂದೆ. ಕೇಳಲಿಲ್ಲ ಏನಿಲ್ಲ, ''ನಿನ್ನೊಟ್ಟಿಗೆ ಕೆಲಸ ಮಾಡ್ತೇನೆ'' ಎಂದು ಅವನ ಜೊತೆ ಸೇರಿದೆ. ಅವನಿಗೋ ವ್ಯವಹಾರ ಆರಂಭಿಸಿದ ಹೊಸತು, ಹೇಳಿಕೊಳ್ಳುವಂತಹ ವ್ಯಾಪಾರ ಇರಲಿಲ್ಲ. ನನ್ನನ್ನು ಜೊತೆ ಸೇರಿಸಿಕೊಳ್ಳುವುದು ಅಷ್ಟು ಅನುಕೂಲವಾದ ಸಮಯವಾಗಿರಲಿಲ್ಲ. ಆದರೂ ''ಸಂಬಳ ಬೇಡ, ನೆಲೆ ಒದಗಿಸಿದರೆ ಸಾಕು'' ಎಂದು ತಳವೂರಿದೆ. ''ನೋಡು, ಆ ಮೂಲೆ ಜಾಗ ಸಾಕು'' ಅಂತಂದು ಕೈಯಲ್ಲಿದ್ದ ಟ್ರಂಕನ್ನು ಅಂಗಡಿಯ ಮೂಲೆಯಲ್ಲಿ ಇಟ್ಟುಬಿಟ್ಟೆ. ಬೇಡ ಎನ್ನಲಿಲ್ಲ. ನನ್ನ ಹೊಟ್ಟೆ ಬಟ್ಟೆಗೆ ಯಾವ ತೊಂದರೆಯಾಗಲಿಲ್ಲ. ಒಂದೆರಡು ವರ್ಷಗಳಲ್ಲಿ ವ್ಯಾಪಾರ ಸಾಕಷ್ಟು ಅಭಿವೃದ್ಧಿಯಾಯಿತು ದೀಪಕನಿಗೆ. ನನ್ನ ಬಗೆಗಿನ ಚಿಂತೆ ಕಳೆಯಿತು. ಮೂರು ವರ್ಷ ಕಳೆದ ಮೇಲೆ ಅಮ್ಮನ ನೆನಪು ಕಾಡಿತು. ಕುರ್ಲಾಗೆ ಹೋದೆ,

